ಉದಯವಾಣಿ
ಗುರುವಾರ, ನವೆಂಬರ್ 2, 2023

## ಕೃಷಿ ಮೇಳ: ಮಳಿಗೆಗಳ ಕಾಯ್ದಿರಿಸುವಿಕೆ ಅವಧಿ ವಿಸ್ತರಣೆ

**ಬೆಂಗಳೂರು:** ಕೃಷಿ ಮೇಳದ ಮಳಿಗೆಗಳ ಕಾಯ್ದಿರಿಸುವಿಕೆ ದಿನಾಂಕವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ನ.13ರವರೆಗೂ ವಿಸ್ತರಣೆ ಮಾಡಿದೆ.

'ಆಹಾರ-ಆರೋಗ್ಯ-ಆದಾಯಕ್ಕಾಗಿ ಸಿರಿಧಾನ್ಯಗಳು' ಎಂಬ ಘೋಷವಾಕ್ಯದೊಂದಿಗೆ ಕೃಷಿ ವಿವಿಯು ನ.17ರಿಂದ 20ರವರೆಗೆ ಜಿಕೆವಿಕೆ ಆವರಣದಲ್ಲಿ ಆಯೋಜಿಸಿರುವ 'ಕೃಷಿ ಮೇಳ-2023' ಕಾರ್ಯಕ್ರಮಕ್ಕೆ ಕೃಷಿ ಉತ್ಪನ್ನಗಳ ಪ್ರದರ್ಶನ ಮಳಿಗೆಗಳನ್ನು ಕಾಯ್ದಿರಿಸಲು ಅ.31ರವರೆಗೆ ಅವಕಾಶ ನೀಡಲಾಗಿತ್ತು. ಪ್ರದರ್ಶಕರ ಒತ್ತಾಯದ ಮೇರೆಗೆ ಈ ಅವಧಿಯನ್ನು ನ.13ರವರೆಗೆ ವಿಸ್ತರಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗೆ 080- 23638883/23330153 ಸಂಪರ್ಕಿಸಬಹುದು.

01-11-2023
V-karnataka Pg 02

## ಮಳಿಗೆ ಕಾಯ್ದಿರಿಸುವಿಕೆ ಅವಧಿ ವಿಸ್ತರಣೆ

**ಬೆಂಗಳೂರು:** ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ನ.17ರಿಂದ 20ರವರೆಗೆ ಕೃಷಿ ಮೇಳ ನಡೆಯಲಿದೆ. ಈ ಮೇಳದ ವ್ಯಾಪಾರ ಮಳಿಗೆ ಕಾಯ್ದಿರಿಸುವಿಕೆ ಅವಧಿ ನ.13ರ ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 080-23638883, 23330153 ಯನ್ನು ಸಂಪರ್ಕಿಸ ಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ದಿನಾಂಕ ಮುಂದೂಡಿಕೆ

**ಬೆಂಗಳೂರು:** ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ ಆವರಣದಲ್ಲಿ ಕೃಷಿ ಮೇಳದ ಅಂಗವಾಗಿ ಪ್ರದರ್ಶಕರ ಒತ್ತಾಯದ ಮೇರೆಗೆ ಮಳಿಗೆಗಳ ಕಾಯ್ದಿರಿಸುವಿಕೆಯನ್ನು ನ.17 ರಿಂದ 20ರವರೆಗೂ ವಿಸ್ತರಿಸಲಾಗಿದೆ.

ಕೃಷಿ ಮೇಳದ ಮಳಿಗೆಗಳ ಕಾಯ್ದಿರಿಸುವಿಕೆಗೆ ನ.31 ಕೊನೆ ದಿನಾಂಕವಾಗಿತ್ತು. ಆದರೆ ಪ್ರದರ್ಶಕರ ಒತ್ತಾಯದ ಮೇರೆಗೆ ಮಳಿಗೆಗಳ ಕಾಯ್ದಿರಿಸುವಿಕೆಯನ್ನು ವಿಸ್ತರಿಸಲಾಗಿದೆ ಎಂದು ಜಿಕೆವಿಕೆ ವಿಸ್ತರಣಾ ನಿರ್ದೇಶಕ ವಿ.ಎಲ್.ಮಧುಪ್ರಸಾದ್ ತಿಳಿಸಿದ್ದಾರೆ.

01-11-2023
S-karnataka Pg 02

## ಅಂತಾರಾಷ್ಟ್ರೀಯ ಸಮ್ಮೇಳನ

**ಬೆಂಗಳೂರು:** ಭತ್ತದ ಕ್ರಿಯಾತ್ಮಕ ಜೆನೋಮಿಕ್ಸ್ ಕುರಿತ 20ನೇ ಅಂತಾರಾಷ್ಟ್ರೀಯ ಸಮ್ಮೇಳನ ಕೃಷಿ ವಿಶ್ವವಿದ್ಯಾಲಯದಲ್ಲಿ ನ.3ರಿಂದ 5ರವರೆಗೆ ನಡೆಯಲಿದೆ.ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಮಾವೇಶ ಭವನದಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಂಟ್ ಜೀನೋಮಿಕ್ಸ್ ಸಂಶೋಧನಾ ಕೇಂದ್ರ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ, ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರ ಸಹಯೋಗದಲ್ಲಿ ನಡೆಯಲಿದೆ.ಸುಸ್ಥಿರ ಹಾಗೂ ಪೌಷ್ಟಿಕ ಭದತ್ರೆಗಾಗಿ ಭತ್ತದ ಸಂಶೋಧನೆ ನಡೆಸುವುದು ಸಮ್ಮೇಳನದ ಮುಖ್ಯ ಧ್ಯೇಯವಾಗಿದೆ. ಕೃಷಿ ವಿವಿ ಉಪ ಕುಲಪತಿ ಡಾ.ಎಸ್.ವಿ.ಸುರೇಶ್, ಕೃಷಿ ವಿಜ್ಞಾನಿ ಪ್ರೊ. ಎಂ.ಎಸ್.ಶೇಷಶಾಯಿ, ಇತರ ಕೃಷಿ ವಿಜ್ಞಾನಿಗಳು, ತಂತ್ರಜ್ಞರು ಪಾಲ್ಗೊಳ್ಳಿದ್ದಾರೆಂದು ಕೃಷಿ ವಿವಿ ಪ್ರಕಟಣೆಯಲ್ಲಿ ತಿಳಿಸಿದೆ.

03-11-2023
S-karnataka Pg 03

03-11-2023
Hindu Pg 08

## Conference on tomato from today

**The Hindu Bureau**
BENGALURU

A two-day national conference titled "Tomato: problems, perspectives and plant breeding solutions" organised by the Foundation for Advanced Training in Plant Breeding, a non-profit organisation, in collaboration with the University of Horticultural Sciences, Bagalkot, Karnataka, will begin from Friday.

The conference will address the following aspects - national/regional scenario in tomato production and economics, climate change and tomato productivity, analysis of market dynamics, elasticity and volatility in the tomato market.

It will be held at the Basic Science College Auditorium, University of Agricultural Sciences, GKVK campus, Bengaluru, from 9.30 a.m.

For more information visit
University Library Website
Web - uasbagrilibindia.org
E-mail- librarian@uasbangalore.edu.in

# Two-day tomato conference in city

**BENGALURU, DHNS:** The Foundation for Advanced Training in Plant Breeding (ATPBR), a non-profit organisation, is collaborating with the University of Horticultural Sciences (UHS), Bagalkot, to organise a two-day national conference on 'Tomato: Problems, Perspectives, and Plant Breeding Solutions' in the city.

The conference, set to begin on Friday, will be held at the Basic Science College Auditorium of the University of Agricultural Sciences, GKVK.

Discussions will enable stakeholders across sectors to deliberate on the national and regional situation of tomato production, supply, and distribution, besides identifying causes for price volatility in the market.

The interactions will also address the gaps in the stakeholders' knowledge of the impact of climate change on tomato production, identify challenges in tomato breeding and draw up solutions, and analyse market dynamics and changes in the tomato market, among other key aspects.

03-11-2023
Dec Hrd Pg 03

## 170 ನಗರಗಳಲ್ಲಿ ರಿಯಾಯಿತಿ ದರದಲ್ಲಿ ಮಾರಾಟ

# ಈರುಳ್ಳಿ ಕೆಜಿಗೆ ಕೇವಲ 25 ರೂಪಾಯಿ!

**ನವದೆಹಲಿ:** ಭಾರತದಲ್ಲಿ ಈರುಳ್ಳಿ ಬೆಲೆ ಗಗನಕ್ಕೇರಿದೆ. ಕಳೆದ ಒಂದು ವಾರದಲ್ಲಿ ಬೆಲೆ ದುಪ್ಪಟ್ಟಾಗಿದ್ದು, ಪ್ರತಿ ಕೆಜಿಗೆ 60ರಿಂದ 90 ರೂಪಾಯಿ ತಲುಪಿದೆ. ಹೀಗಾಗಿ ದರ ನಿಯಂತ್ರಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಬಫರ್ ಸ್ಟಾಕ್ (ದಾಸ್ತಾನು ಸಂಗ್ರಹ) ಬಿಡುಗಡೆ ಮೂಲಕ ರಿಯಾಯಿತಿ ದರದಲ್ಲಿ ಮಾರಾಟಕ್ಕೆ ಕ್ರಮ ಕೈಗೊಂಡಿದೆ. ಬೆಂಗಳೂರು ಸೇರಿ 170 ನಗರಗಳ 685 ಕೇಂದ್ರಗಳಲ್ಲಿ ಸ್ಥಾಪಿಸಿರುವ ಮಳಿಗೆಗಳ ಮೂಲಕ ಪ್ರತಿ ಕೆಜಿಗೆ 25 ರೂಪಾಯಿಯಂತೆ ಮಾರಾಟ ಮಾಡುತ್ತಿದೆ.




ಈರುಳ್ಳಿ ಬೆಲೆ ಏರಿಕೆ ನಿಯಂತ್ರಿಸಲು ಕೇಂದ್ರ ಸರ್ಕಾರ ಬಫರ್ ಸ್ಟಾಕ್‌ನಿಂದ ಈರುಳ್ಳಿ ಬಿಡುಗಡೆ ಮಾಡುವುದು ಹಾಗೂ ಆಮದು ಹೆಚ್ಚಳ ಸೇರಿದಂತೆ ವಿವಿಧ ಕ್ರಮ ಕೈಗೊಳ್ಳುತ್ತಿದೆ. ಆಗಸ್ಟ್ ಎರಡನೇ ವಾರದಿಂದ ದೇಶಾದ್ಯಂತ ಪ್ರಮುಖ ಈರುಳ್ಳಿ ಬಳಕೆ ಕೇಂದ್ರಗಳಲ್ಲಿ ಬಫರ್ ಸ್ಟಾಕ್ ಮೂಲಕ ಈರುಳ್ಳಿ ವಿತರಿಸಲಾಗಿದೆ. ಎನ್‌ಸಿಸಿಎಫ್ ಮತ್ತು ನಫೆಡ್ ನಿರ್ವಹಿಸುವ ಮೊಬೈಲ್ ವ್ಯಾನ್‌ಗಳ ಮೂಲಕವೂ ಗ್ರಾಹಕರಿಗೆ ಪ್ರತಿ ಕೆಜಿಗೆ 25 ರೂಪಾಯಿಗಳ ಸಬ್ಸಿಡಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

### 2 ಲಕ್ಷ ಟನ್ ಸಂಗ್ರಹ ಯೋಜನೆ

ಈಗಾಗಲೇ ಸಂಗ್ರಹಿಸಲಾದ 5 ಲಕ್ಷ ಟನ್ ಈರುಳ್ಳಿ ಜತೆಗೆ, ಬಫರ್‌ಗಾಗಿ ಹೆಚ್ಚುವರಿ 2 ಲಕ್ಷ ಟನ್‌ಗಳನ್ನು ಸ್ವಾಧೀನಪಡಿಸಿಕೊಳ್ಳುವ ಯೋಜನೆಯನ್ನು ಕೇಂದ್ರವು ಇತ್ತೀಚೆಗೆ ಘೋಷಿಸಿದೆ. ದೆಹಲಿಯ 71, ಜೈಪುರದ 22, ಲೂಧಿಯಾನದ 12, ವಾರಾಣಸಿಯ 10, ರೋಹ್ಟಕ್‌ನ 6 ಮತ್ತು ಶ್ರೀನಗರದಲ್ಲಿ 5 ಸ್ಥಗಳಗಳು ಸೇರಿ ವಿವಿಧ ಸ್ಥಳಗಳಲ್ಲಿ ಮೊಬೈಲ್ ವ್ಯಾನ್‌ಗಳ ಮೂಲಕ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಬೆಂಗಳೂರು, ಭೋಪಾಲ್, ಇಂದೋರ್, ಭುವನೇಶ್ವರ, ಹೈದರಾಬಾದ್‌ನಲ್ಲಿ ಕೂಡ ಮೊಬೈಲ್ ವ್ಯಾನ್‌ಗಳ ಮೂಲಕ ರಿಯಾಯಿತಿ ದರದಲ್ಲಿ ಮಾರಾಟ ಕೈಗೊಳ್ಳಲಾಗಿದೆ. ಈರುಳ್ಳಿ ಪೂರೈಕೆಯ ಪ್ರಮುಖ ರಾಜ್ಯವಾದ ಮಹಾರಾಷ್ಟ್ರದಲ್ಲಿ ರಫ್ತು ನಿರ್ಬಂಧಗಳ ನಂತರ ಸಗಟು ಬೆಲೆ ಕಡಿಮೆಯಾಗುತ್ತಿದೆ. ಹೀಗಿದ್ದರೂ ರಾಷ್ಟ್ರ ರಾಜಧಾನಿ ಈರುಳ್ಳಿ ದುಬಾರಿಯಾಗಿದ್ದು, ಸರಾಸರಿ ಚಿಲ್ಲರೆ ಬೆಲೆ ಪ್ರತಿ ಕಿಲೋ ಗ್ರಾಂಗೆ 78 ರೂಪಾಯಿ ತಲುಪಿದೆ.

03-11-2023
Vijayavani Pg 08

03-11-2023
Viswavani Pg 08

# ಬಾಳೆ ಎಲೆ ಆರೋಗ್ಯದ ಅಲೆ

● ಬೆಂ.ಮು. ಮಾರುತಿ

ನಮ್ಮಲ್ಲಿ ಬಾಳೆ ಎಲೆಯಲ್ಲಿ ಊಟ ಮಾಡುವ ಪದ್ಧತಿ ತುಂಬಾ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಶುಭ ಸಮಾರಂಭಗಳಲ್ಲಿ ಬಾಳೆ ಎಲೆಯ ಊಟಕ್ಕೆ ತುಂಬಾ ಮಹತ್ವವಿದೆ. ಕೆಲವು ಕಡೆ ಹಬ್ಬದ ದಿನದಲ್ಲಂತೂ ಎಲ್ಲಿಂದಾದರೂ ಬಾಳೆಯನ್ನು ತಂದು ಊಟ ಮಾಡುವ ಪದ್ಧತಿ ಇನ್ನೂ ನಮ್ಮಲ್ಲಿದೆ. ದೇವರ ನೈವೇದ್ಯಕ್ಕಂತೂ ಬಾಳೆ ಎಲೆಯೇ ಶ್ರೇಷ್ಠ. ಮೊದಲಿಂದಲೂ ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಉಪಯೋಗವಾಗುತ್ತಿರುವ ಈ ಎಲೆಗೆ ಎಷ್ಟೋ ರೋಗಗಳನ್ನು ಗುಣಪಡಿಸುವ ಶಕ್ತಿಯಿದೆ.

● **ಬಿಳಿ ಕೂದಲಿನ ಸಮಸ್ಯೆಗೆ ಮನೆಮದ್ದು:** ಚಿಕ್ಕ ಮಕ್ಕಳಲ್ಲಿ ಪೋಷಕಾಂಶಗಳ ಕೊರತೆಯಿಂದ ಬಿಳಿ ಕೂದಲಿನ ಸಮಸ್ಯೆ ಕಂಡುಬರುತ್ತದೆ. ಇದಕ್ಕೆ ಚಿಕ್ಕ ಮಕ್ಕಳಿರುವಾಗಲೆಂದಲೇ ಬಾಳೆ ಎಲೆಯಲ್ಲಿ



ಊಟ ಮಾಡುತ್ತಾ ಬಂದರೆ ಮುಂದೆ ಈ ಬಿಳಿ ಕೂದಲಿನ ಸಮಸ್ಯೆ ಕಾಣಿಸುವುದಿಲ್ಲ.

● **ಸುಟ್ಟ ಗಾಯಗಳಿಗೆ ಪರಿಹಾರ:** ಸುಟ್ಟ ಗಾಯಗಳಿಗೆ ಬಾಳೆ ಎಲೆಯನ್ನು ಶುಂಠಿ ಎಣ್ಣೆಯಲ್ಲಿ ಸ್ವಲ್ಪ ಅದ್ದಿ, ಗಾಯದ ಮೇಲೆ ಬಟ್ಟೆ ಹಾಕಿ ಕಟ್ಟುವುದರಿಂದ ಗಾಯ ಬೇಗನೆ ವಾಸಿಯಾಗುತ್ತದೆ.

ಜೀರ್ಣಕ್ರಿಯೆಗೆ ಸಹಕಾರಿ

ಬಾಳೆ ಎಲೆಯ ಮೇಲ್ಪದರದಲ್ಲಿ ಎಪಿಗಲ್ಲೋಕಾಟೆಚಿನ್ ಗ್ಯಾಲೇಟ್ ಎಂಬ ಪಾಲಿಫೀನಾಲ್ ಅಂಶವಿರುತ್ತದೆ. ನಾವು ಬಿಸಿಯಾದ ಆಹಾರ ಪದಾರ್ಥಗಳನ್ನು ಬಾಳೆ ಎಲೆಯ ಮೇಲೆ ಹಾಕಿದಾಗ, ಇದು ಕರಗಿ ಆಹಾರದೊಂದಿಗೆ ಸೇರಿ ನಮ್ಮ ದೇಹಕ್ಕೆ ಹೋಗುತ್ತದೆ. ಇದರಿಂದ ನಮ್ಮಲ್ಲಿ ಜೀರ್ಣಕ್ರಿಯೆ ಉತ್ತಮವಾಗುತ್ತದೆ.

ಜೈವಿಕ ರಾಸಾಯನಿಕ ನಿವಾರಕ

ಬಾಳೆ ಎಲೆಯ ಮೇಲೆ ಬ್ಯಾಕ್ಟೀರಿಯಾಗಳು ಬೆಳೆಯುವುದಿಲ್ಲ, ಬಾಳೆ ಎಲೆಯಲ್ಲಿ ಯಾವುದೇ ಬಿಸಿ ಆಹಾರ ಬಡಿಸಿಕೊಂಡು ಹೊಟ್ಟೆಗೆ ಹೋಗುವ ಮೊದಲೇ ಆ ಬ್ಯಾಕ್ಟೀರಿಯಾಗಳು ಕೊಲ್ಲಲ್ಪಡುತ್ತವೆ. ಅದರಲ್ಲೂ ಕ್ಯಾನ್ಸರ್ ರೋಗಕ್ಕೆ ಕಾರಣವಾದ ಫ್ರೀರ್ಯಾಡಿಕಲ್ ಎಂಬ ಜೈವಿಕ ರಾಸಾಯನಿಕವು ದೇಹ ಸೇರುವುದನ್ನು ತಡೆಯುತ್ತದೆ.

ರಕ್ತ ಭೇದಿಯ ನಿಯಂತ್ರಕ

ನಾವು ಬಾಳೆ ಎಲೆಯು ತಾಜಾ ಇದ್ದಾಗ ಮಾತ್ರ ಉಪಯೋಗಕ್ಕೆ ಬರುತ್ತದೆ ಎಂದುಕೊಂಡರೆ ಅದು ತಪ್ಪು. ಒಣಗಿದ ಬಾಳೆ ಎಲೆಯ ಸೇವನೆಯು ರಕ್ತಸ್ರಾವವಾಗಿ ಭೇದಿ ಆಗುವುದನ್ನು ಕಡಿಮೆ ಮಾಡುತ್ತದೆ.

ಚರ್ಮದ ಸಮಸ್ಯೆಗೆ ಬಾಳೆಎಲೆ

ಚರ್ಮದ ಸಮಸ್ಯೆಗೆ ಬಾಳೆಎಲೆ : ಬಾಳೆಎಲೆ ಚರ್ಮದ ಆರೋಗ್ಯದ ರಕ್ಷಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಚರ್ಮದಲ್ಲಿನ ಗಾಯಗಳನ್ನು, ತುರಿಕೆಗಳನ್ನು ಬಾಳೆ ಎಲೆಯು ಗುಣಪಡಿಸುತ್ತದೆ. ತಾಜಾ ಬಾಳೆ ಎಲೆಯನ್ನು ಜಜ್ಜಿ ಅದನ್ನು ಗಾಯವಾದ ಚರ್ಮದ ಭಾಗಕ್ಕೆ ಹಚ್ಚಿಕೊಳ್ಳಬೇಕು. ಹೀಗೆ ದಿನಕ್ಕೆ 3 ರಿಂದ 4 ಬಾರಿ ಬಾಳೆ ಎಲೆ ಜಜ್ಜಿದ ಮಿಶ್ರಣವನ್ನು ಬದಲಾಯಿಸುವುದರಿಂದ ಗಾಯ ಬೇಗ ವಾಸಿಯಾಗುತ್ತದೆ.

ತಲೆ ಹೊಟ್ಟಿನ ಸಮಸ್ಯೆ ನಿವಾರಣೆ

ತಾಜಾ ಬಾಳೆ ಎಲೆಯನ್ನು ಜಜ್ಜಿ ಅದರಿಂದ ರಸ ತೆಗೆದು, ರಸವನ್ನು ಕೂದಲ ಬುಡಕ್ಕೆ ಹಚ್ಚಿಕೊಳ್ಳಬೇಕು. ಸ್ವಲ್ಪ ಸಮಯದ ನಂತರ ತಲೆಗೆ ಸ್ನಾನ ಮಾಡಬೇಕು. ಇದರಿಂದ ತಲೆಯಲ್ಲಿ ಹೊಟ್ಟಿನ ಸಮಸ್ಯೆ ದೂರವಾಗಿ, ಆರೋಗ್ಯವಾದ ಕೂದಲು ಬೆಳೆಯಲು ಸಹಾಯಕವಾಗುತ್ತದೆ.

### ಮಕ್ಕಳ ಸೂಕ್ಷ್ಮ ತ್ವಚೆಗೆ ರಕ್ಷಣೆ

ಸಣ್ಣ ಮಕ್ಕಳ ಚರ್ಮ ತುಂಬಾ ಸೂಕ್ಷ್ಮವಾಗಿರುತ್ತದೆ. ಸೊಳ್ಳೆಗಳು ಅಥವಾ ಇನ್ಯಾವುದೇ ಹುಳ ಹಪ್ಪಟೆಗಳು ಕಡಿದರೆ ಸಣ್ಣ ಸಣ್ಣ ಗುಳ್ಳೆಗಳಾಗುವ ಸಾಧ್ಯತೆ ಇರುತ್ತದೆ. ಬಾಳೆ ಎಲೆಯ, ಎಳೆಯ ಕುಡಿಯ ರಸವನ್ನು ತೆಗೆದು, ಒಲಿವ್ ಎಣ್ಣೆ ಮತ್ತು ಸ್ವಲ್ಪ ಜೇನು ಮೇಣವನ್ನು ಸೇರಿಸಿ ಹಚ್ಚುವುದರಿಂದ ಚರ್ಮದ ಮೇಲಿನ ಗುಳ್ಳೆಗಳು ಕಡಿಮೆಯಾಗುತ್ತವೆ. ಗರ್ಭಿಣಿಯರು ಬಾಳೆ ಎಲೆಯಲ್ಲಿ ಊಟ ಮಾಡುವುದರಿಂದ ಹುಟ್ಟುವ ಮಕ್ಕಳ ಆರೋಗ್ಯ ಚೆನ್ನಾಗಿರುತ್ತದೆ.